ಇಂದು ದಿಃ **27-08-2026 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದ ಸಾಕ್ಷಿಯನ್ನು ಪುನಃ ಕರೆಯಿ**ಸಿ ಪ್ರಮಾಣ ವಚನ ಬೋಧಿಸಲಾಯಿತು**.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ.ಆರ್.ಜಿ ವಕೀಲರಿಂದ ಮಧ್ಯಂತರ ಅರ್ಜಿಯ ನಂಬರ್ 1 ರ ಆದೇಶ ಕುರಿತಂತೆ ಎದುರುದಾರರ ಪರಃ**

ಸಾಕ್ಷಿಗೆ ಎರಡು ಅಂಚೆ ಸ್ವೀಕೃತಿಪತ್ರಗಳ ದೃ.ನಕಲುಗಳನ್ನು ತೋರಿಸಿ, ಅದರಲ್ಲಿ ನನ್ನ ಮತ್ತು ನನ್ನ ಹೆಂಡತಿಯ ಸಹಿ ಇದೆ ಎಂದರೆ ಸರಿ. ಸದರಿ ದೃಢೀಕೃತ ನಕಲನ್ನು ನಿ.ಆರ್-1 ಎಂದು ಗುರುತಿಸಲಾಯಿತು. ದಾವೆ ದಾಖಲು ಮಾಡುವ ಮೊದಲು ನೀಡಿದ ನೋಟೀಸ್ ನ ಸ್ವೀಕೃತಿ ಪತ್ರಗಳು ಇವು ಎಂದರೆ ಸರಿಯಲ್ಲ. ಈ ಸ್ವೀಕೃತಿಪತ್ರಗಳಿಗೆ ನಾವೇ ಸಹಿ ಮಾಡಿ ನೋಟೀಸ್ ಪಡೆದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಾವಾ ಸಮನ್ಸ್ ನ ದೃ.ನಕಲನ್ನು ತೋರಿಸಿ ಕೇಳಲು, ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಮನ್ಸ್ ನ ದೃ.ನಕಲನ್ನು ನಿ.ಆರ್ 2 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಇನ್ನೊಂದು ಸಮನ್ಸ್ ನ ದೃ.ನಕಲನ್ನು ತೋರಿಸಿ ಕೇಳಲು, ಸದರಿ ಸಮನ್ಸ್ ನಲ್ಲಿ ಇರುವ ಸಹಿ ನನ್ನ ಹೆಂಡತಿಯದು ಎಂದರೆ ಸರಿ. ಸದರಿ ಸಮನ್ಸ್ ನ ದೃ.ನಕಲನ್ನು ನಿ.ಆರ್ 3 ಎಂದು ಗುರುತಿಸಲಾಯಿತು.

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ತೀರ್ಪು ಆದ ವಿಷಯ ನನಗೆ ಯಾವ ದಿನಾಂಕದಂದು ಗೊತ್ತಾಯಿತು ಎಂದು ದಿನಾಂಕ ತಿಳಿಸಿಲ್ಲ ಎಂದರೆ ಸರಿ. ಆ ರೀತಿ ದಿನಾಂಕ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿಗೆ ಅವರ ಮತ್ತು ಅವರ ಹೆಂಡತಿಯ ವಕಾಲತ್ ನಲ್ಲಿ ಇರುವ ಸಹಿಗಳನ್ನು ತೋರಿಸಿ ಕೇಳಲು ಗುರುತಿಸಿದ್ದು, EP No.32/2023 ರಲ್ಲಿ ಸಲ್ಲಿಸಿದ ವಕಾಲತ್ ನ ದೃ.ನಕಲನ್ನು ನಿ.ಆರ್ 4 ಎಂದು ಗುರುತಿಸಲಾಯಿತು. ಅಮಲ್ ಜಾರಿ ಅರ್ಜಿಯಲ್ಲಿ, ಶ್ರೀ ಎಸ್.ಎನ್ ಪ್ರಕಾಶ್ ಎಂಬ ವಕೀಲರಿಗೆ ವಕಾಲನ್ನು ಕೊಟ್ಟಿದ್ದೇವು ಎಂದರೆ ಸರಿ. ವಕಾಲತ್ ನಲ್ಲಿ ದಿನಾಂಕಃ22-04-2024 ರಂದು ನಾವು ಸಹಿ

ಮಾಡಿಕೊಟ್ಟಿದ್ದೇವೆ ಎಂದು ದಿನಾಂಕ ನಮೂದು ಇದೆ ಎಂದರೆ ಸರಿ. ಕೂಡಲೇ ಅಪೀಲು ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ವಕೀಲರು ತಿಳಿಸಲಿಲ್ಲ ಎಂದು ಹೇಳುತ್ತಾರೆ. ವಕೀಲರು ತಿಳಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವೆಯ ಬಗ್ಗೆ ಆಗಲೇ ಮಾಹಿತಿ ಇದ್ದರೂ , ಎದುರುದಾರರಿಗೆ ತೊಂದರೆ ಕೊಡಲು ಈ ಅಪೀಲನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,
ಹೊನ್ನಾಳಿ.